■ ಹನಿ

# ಬಂಡುಕೋರ ಅಸಾಂಜೆ



ವಿಕಿಲೀಕ್ಸ್ ಎಂಬ ಹೆಸರು ಅಧಿಕಾರಸ್ಥರ ತೊಳ್ಳೆ ನಡುಗುವಂತೆ ಮಾಡಿದೆ. ಈ ಶತಮಾನದ ಅತ್ಯಂತ ದೊಡ್ಡ 'ಲೀಕ್' ಇದು! ವಿಕಿಲೀಕ್ಸ್ ಎಂಬ ವೆಬ್‌ಸೈಟ್ ಪ್ರಕಟಿಸುತ್ತಿರುವ ರಹಸ್ಯ ಮಾಹಿತಿಗಳನ್ನು ನೋಡಿ ಅಮೆರಿಕದ ಅಧ್ಯಕ್ಷರೇ ಗಡಗಡ ನಡುಗುತ್ತಿದ್ದಾರೆ. ಯುದ್ಧಕೋರ ಅಮೆರಿಕ ಮತ್ತು ಅದರ ಗುಪ್ತಚರ ಸಂಸ್ಥೆ ಸಿಐಎ ಯ ಬಂಡವಾಳವೆಲ್ಲ ಒಂದೊಂದಾಗಿ ಬಯಲಾಗುತ್ತಿದೆ. ವಿಕಿಲೀಕ್ಸ್ ಮಾಲೀಕ ಜೂಲಿಯನ್ ಪೌಲ್ ಅಸಾಂಜೆ ಇದೀಗ ವಿಶ್ವ ತನಿಖಾ ಪತ್ರಿಕೋದ್ಯಮದ ಹೊಸ ಹೀರೊ. ಆತನನ್ನು ಬಗ್ಗು ಬಡಿಯಲೆಂದೇ ಅಮೆರಿಕ ಮತ್ತು ಬ್ರಿಟನ್ ಸರಕಾರಗಳು ಸೇರಿ ಹಳೆಯ ಕೇಸೊಂದಕ್ಕೆ ಜೀವ ಕೊಟ್ಟಿವೆ. ಇಬ್ಬರು ಹುಡುಗಿಯರ ಮೇಲೆ ಅತ್ಯಾಚಾರ ನಡೆಸಿದ್ದಾನೆಂಬ ಆರೋಪದಲ್ಲಿ ಅಸಾಂಜೆಯನ್ನು ಬಂಧಿಸಿ ಜೈಲಿಗಟ್ಟಲಾಗಿದೆ.

ಅಸಾಂಜೆಯದ್ದು ಬಾಲ್ಯದಿಂದಲೂ ವರ್ಣರಂಜಿತ ವ್ಯಕ್ತಿತ್ವ. ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌ನ ಈ ಪೋರ 16ರ ಹರೆಯದಲ್ಲೇ ಇಂಟರ್‌ನೆಟ್ ಕನ್ನಕೋರ (ಹ್ಯಾಕರ್) ಆಗಿ ಖ್ಯಾತಿ ಹೊಂದಿದ್ದ. ಆಸ್ಟ್ರೇಲಿಯಾ ವಿ.ವಿ ಮತ್ತು ನಾರ್ಟೆಲ್ ಮೊಬೈಲ್ ಕಂಪೆನಿಯ ಖಾತೆಗೆ ಕನ್ನ ಹಾಕಿ ಮಾಹಿತಿ ಓದಿದ್ದ ಭೂಪನೀತ. ಒಟ್ಟು 24 ಹ್ಯಾಕಿಂಗ್ ಕೇಸ್‌ಗಳ ತನಿಖೆಯಾಗಿ ಆಗಿನ ಕೋರ್ಟ್ 2100 ಡಾಲರ್ ದಂಡವನ್ನೂ ವಿಧಿಸಿತ್ತು! ಆದರೆ ಆತ ಅದೆಲ್ಲವನ್ನೂ ಮಾಡಿದ್ದು ಹುಡುಗಾಟಕ್ಕೆ. ಈಗ 39ರ ಹರೆಯದ ಅಸಾಂಜೆ ಪತ್ರಕರ್ತ, ಪ್ರಕಾಶಕ ಮತ್ತು ಅಂತರ್ಜಾಲ ಆ್ಯಕ್ಟಿವಿಸ್ಟ್ ಎಂದೇ ಪ್ರಖ್ಯಾತ.

18ರ ಹರೆಯದಲ್ಲಿ ಗರ್ಲ್‌ಫ್ರೆಂಡ್ ಜತೆ ವಾಸವಾಗಿ ಮಗು ಪಡೆದ ಅಸ್ಸಾಂಜೆ ಬಳಿಕ ಮಗನ ವಶಕ್ಕಾಗಿ ಹೆಂಡತಿಯೊಂದಿಗೆ ಕೋರ್ಟ್ ಕದನ ನಡೆಸಿದಾತ. ಈತನ ತಾಯಿಯೂ ಹಾಗೆಯೇ. ಈತನಿಗೆ ಒಂದು ವರ್ಷವಿದ್ದಾಗ ಈತನ ತಂದೆಯನ್ನು ಮದುವೆಯಾದಳು. ಆ ಬಳಿಕ 79ರಲ್ಲಿ ಇನ್ನೊಂದು ಮದುವೆ ಮಾಡಿಕೊಂಡಳು. ಇಬ್ಬರು ಗಂಡಂದಿರಿಂದ ಆದ ಇಬ್ಬರು ಮಕ್ಕಳನ್ನೂ ವಶಕ್ಕೆ ಪಡೆಯಲು ಕೋರ್ಟ್ ಮೆಟ್ಟಿಲು ಹತ್ತಿದ್ದೇ ಅಲ್ಲದೆ, ಇಬ್ಬರು ಮಕ್ಕಳ ಜತೆ ಐದು ವರ್ಷಗಳ ಕಾಲ ಭೂಗತ ಜೀವನ ನಡೆಸಿದ್ದಳು! ಒಟ್ಟಾರೆ ಅಸಾಂಜೆಯದ್ದು ವರ್ಣರಂಜಿತ ವ್ಯಕ್ತಿತ್ವ. ಚಿಕ್ಕಂದಿನಿಂದಲೇ ಅನ್ಯಾಯದ ವಿರುದ್ಧ ಸಿಡಿದೇಳುತ್ತಿದ್ದ ಅಸಾಂಜೆ, ಈಗ ಸಿಐಎ ಗೆ ಅತಿದೊಡ್ಡ ತಲೆನೋವು!

# ದಿ ಷೋ ಮಸ್ಟ್-ಗೋ!

– ಹೀಗೆಂದರೆ ಷೋ ನಿರಂತರವಾಗಿ ನಡೆಯಬೇಕು ಎಂದರ್ಥ. ಟಿ.ವಿ ಸಂದರ್ಶನಗಳ ಮೂಲಕವೇ ಜಗದ್ವಿಖ್ಯಾತಿ ಹೊಂದಿದ ಓಪ್ರಾ ವಿನ್‌ಫ್ರೀ ನಡೆಸುತ್ತಿರುವ ಕಾರ್ಯಕ್ರಮಕ್ಕೆ 25 ವರ್ಷ ತುಂಬುತ್ತಿದೆ. ಮುಂದಿನ ವರ್ಷ ಸೆಪ್ಟೆಂಬರ್‌ನಲ್ಲಿ 25 ವರ್ಷ ತುಂಬಿದ ವಾರದಲ್ಲೇ ಈ ಷೋ ನಿಂತು ಹೋಗಲಿದೆ! 56ರ ಹರೆಯದ ಓಪ್ರಾಳನ್ನು ಆಕೆಯ ನಿಕಟವರ್ತಿ ಬಾರ್ಬರಾ ವಾಲ್ಟರ್ಸ್ ಈಚೆಗೆ ಎಬಿಸಿ ಚಾನೆಲ್‌ಗಾಗಿ ಸಂದರ್ಶಿಸಿದ್ದು, ಇಡೀ ಸಂದರ್ಶನ ಓಪ್ರಾಳ ಸುಖ– ದುಃಖಗಳನ್ನೆಲ್ಲ ಬಿಚ್ಚಿಟ್ಟಿದೆ.

'ನನ್ನನ್ನು ಸಲಿಂಗಿ ಎಂದು ಜರೆದರು. ನನ್ನ ಮತ್ತು ಜೀವದ ಗೆಳತಿ ಗೇಯ್ಲ್ ಕಿಂಗ್‌ಳ ಸ್ನೇಹದ ಬಗ್ಗೆ ಲೇವಡಿ ಮಾಡಿದರು. ನಾನು ಸಲಿಂಗಿ ಅಲ್ಲ ಎಂದರೆ ಯಾರೂ ನಂಬಲಿಲ್ಲ' ಎಂದು ಓಪ್ರಾ ಈ ಸಂದರ್ಶನದಲ್ಲಿ ಕಣ್ಣೀರು ಹಾಕಿದ್ದಾಳೆ. 'ಸ್ಟೆಡ್‌ಮನ್ ಜತೆಗಿನ ಸುದೀರ್ಘ ದಾಂಪತ್ಯ ಇದ್ದರೂ, ಕೆಲಸದ ಮಧ್ಯೆ ಒಂದು ಮಗುವನ್ನು ಪಡೆಯಲು ಪುರುಸೊತ್ತೇ ಸಿಗಲಿಲ್ಲ. ಅದಕ್ಕಾಗಿ ಈಗ ಬೇಜಾರು ಪಡಲಾರೆ' ಎಂದು ತಣ್ಣಗೆ ದುಃಖಿಸಿದ್ದಾಳೆ. ಷೋ ನಿಲ್ಲಿಸಿದ ಬಳಿಕ ಸ್ವಂತ ಕೇಬಲ್ ಕಂಪೆನಿ ಆರಂಭಿಸುತ್ತೇನೆ ಎಂದು ನಕ್ಕಿರುವ ವಿನ್‌ಫ್ರೀ ನಿಜಕ್ಕೂ ಸ್ವತಂತ್ರ ಪತ್ರಕರ್ತೆ!



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65